ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ 29ನೇ ಆಗಸ್ಟ್ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.40 ಗಂಟೆಗೆ ಸಮಾವೇಶಗೊಂಡಿತು.

ಸಭಾಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು

ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರೈತರಿಗೆ ರಕ್ಷಣೆ ಕುರಿತು

572 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಕೃಷಿಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರೈತರು ಬೆಳೆದ ಬೆಳೆಗಳನ್ನು ಮಾರಾಟ ಮಾಡಲು ಮಾರುಕಟ್ಟೆಗೆ ತಂದಾಗ ಯಾವ ಯಾವ ರೀತಿಯ ರಕ್ಷಣೆಯನ್ನು ನೀಡಲಾಗುತ್ತಿದೆ?

ಆ) ದಲ್ಲಾಲಿಗಳು ರೈತರ ಬಳಿ, ಮಾರಾಟಗಾರರ ಬಳಿ ಕಮಿಷನ್ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ರೈತರು ತಮ್ಮ ಉತ್ಪನ್ನಗಳನ್ನು ಮಾರಾಟಕ್ಕಾಗಿ ಮಾರುಕಟ್ಟೆಗೆ ತಂದು, ದಲ್ಲಾಲರ ಮೂಲಕ ಮಾರಾಟ ಮಾಡಿದಲ್ಲಿ ದಲ್ಲಾಲರ ಅಂಗಡಿಗಳಲ್ಲಿ, ಹರಾಜು ಕಟ್ಟೆಗಳಲ್ಲಿ ಉತ್ಪನ್ನಗಳ ಸಂಗ್ರಹಣೆ ಮಾಡಿ ಮಾರಾಟಕ್ಕಾಗಿ ವ್ಯವಸ್ಥೆ ಕಲ್ಪಿಸಲಾಗಿದೆ. ಮಾರಾಟವಾದ ತಕ್ಷಣ ನಗದು ಹಣ ಪಾವತಿ ಮಾಡುವುದು, ಉತ್ಪನ್ನಗಳನ್ನು ನೇರವಾಗಿ ಖರೀದಿದಾರರಿಗೆ ಮಾರಾಟ ಮಾಡಲು ಇಚ್ಛಿಸಿದಲ್ಲಿ ಸಮಿತಿಗಳಲ್ಲಿ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುವುದು. ಪ್ರಾಂಗಣದಲ್ಲಿ ಉತ್ಪನ್ನಗಳನ್ನು ಶೇಖರಿಸಲು ಗೋದಾಮು ವ್ಯವಸ್ಥೆ ಉತ್ಪನ್ನಗಳಿಗೆ ಅಡಮಾನ ಸಾಲ ವ್ಯವಸ್ಥೆ ಅಲ್ಲದೆ

ನಿರ್ದಿಷ್ಟ ಪಡಿಸಿದ ಹಮಾಲಿ ಮತ್ತು ತೂಕದ ಚಾರ್ಜುಗಳನ್ನು ಮಾತ್ರ ರೈತರು ಪಾವತಿಸಬೇಕಿದ್ದು, ಅನಧಿಕೃತ ರಿವಾಜುಗಳನ್ನು ವಸೂಲಿ ಮಾಡುವುದನ್ನು ನಿಷೇಧಿಸಿದೆ. ಮಾರಾಟದ ವಿಷಯದಲ್ಲಿ ಉದ್ಭವಿಸುವ ತಂಟೆ ತಕರಾರುಗಳನ್ನು ಇತ್ಯರ್ಥ ಪಡಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿದೆ. ಅನಧಿಕೃತ ರಿವಾಜುಗಳು, ದಲ್ಲಾಲಿ ಇತ್ಯಾದಿ ರೈತರಿಂದ ವಸೂಲಿ ಮಾಡಿರುವ ಬಗ್ಗೆ ದೂರುಗಳು ಸಮಿತಿಗೆ ನೀಡಿದ್ದಲ್ಲಿ ಅಂತಹಾ ವರ್ತಕರು / ಖರೀದಿದಾರರ / ದಲ್ಲಾಲರ ವಿರುದ್ಧ ಕಾಯ್ದೆ ಮೇರೆಗೆ ಕಾನೂನು ಕ್ರಮ ಜರುಗಿಸುವ ವ್ಯವಸ್ಥೆ ಇದೆ.

ಆ) ಕೆಲವೊಂದು ಪ್ರಕರಣಗಳು ಗಮನಕ್ಕೆ ಬಂದಿವೆ.

ಇ) ರೈತರಿಂದ ದಲ್ಲಾಲಿ ಪಡೆಯುವುದನ್ನು ನಿಷೇದಿಸಿ ಕಾಯ್ದೆಗೆ 1966ರಲ್ಲಿ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ತದನಂತರ ರೈತರಿಂದ ದಲ್ಲಾಲಿ ಪಡೆದ 410 ಪ್ರಕರಣಗಳು ಮಾರುಕಟ್ಟೆ ಸಮಿತಿಗಳ ಗಮನಕ್ಕೆ ಬಂದಿದ್ದು, ಅಂತಹಾ ಪ್ರಕರಣಗಳಲ್ಲಿ ರೂ.2,05,933-00 ಮೊತ್ತವನ್ನು ರೈತರಿಗೆ ಹಿಂದಿರುಗಿಸಲಾಗಿದೆ.

ರೈತರಿಂದ ಅನಧಿಕೃತವಾಗಿ ದಲ್ಲಾಲ ಹಾಗೂ ಅನಧಿಕೃತ ರಿವಾಜುಗಳನ್ನು ಪಡೆಯುವುದನ್ನು ತಡೆಯಲು ರೈತರಿಗೆ ತಿಳುವಳಿಕೆ ನೀಡುವ ಸಲುವಾಗಿ ಪ್ರಚಾರ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡಲಾಗಿದೆ. ದಲ್ಲಾಲಿ ಪಡೆಯುವವರ ವಿರುದ್ಧ ರೈತರು ಮಾರುಕಟ್ಟೆ ಸಮಿತಿಗಳಿಗೆ ದೂರು ನೀಡಿದಾಗ ಪರಿಣಾಮಕಾರಿಯಾಗಿ ಕಾನೂನು ಕ್ರಮ ಜರುಗಿಸಲು ಅವಕಾಶವಿದೆ. ಮಾರುಕಟ್ಟೆ ಸಮಿತಿಯ ಅಧಿಕಾರಿಗಳಿಂದ ರೈತರಿಗೆ, ಮಾರಾಟ ಮಾಡುವವರಿಗೆ ಪ್ರಚಾರ ಮಾಧ್ಯಮದ ಮೂಲಕ ತಿಳುವಳಿಕೆ ನೀಡಲಾಗುತ್ತಿದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ದೀರ್ಘವಾದ ಉತ್ತರವನ್ನು ಕೊಟ್ಟು ಬಿಟ್ಟಿದ್ದಾರೆ. ನಿರ್ದಿಷ್ಟವಾಗಿ ರೈತರು ಸರಕುಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಬಂದರೆ ಅದು ಲೋಕಲ್ ಮಾರುಕಟ್ಟೆ ಇರಬಹುದು, ಅಥವಾ ಬೆಂಗಳೂರು ಮಾರುಕಟ್ಟೆ ಇರಬಹುದು ಎಲ್ಲಿಗಾದರೂ ಆಗಲಿ, ಆತ ಬಸ್ಸಿನಿಂದ ಅಥವಾ ಟ್ರಾಕ್ಟರ್‌ನಿಂದ ಇಳಿಸಿದ ತಕ್ಷಣ ಅಲ್ಲಿಂದ ತೊಂದರೆಗಳು ಪ್ರಾರಂಭವಾಗುತ್ತವೆ. ಕೂಲಿಯಿಂದ ಹಿಡಿದು ಮಾರುಕಟ್ಟೆಯಲ್ಲಿ ಹರಾಜು ಆಗುವವರೆಗೆ ರೈತ ತುಂಬಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಲ್ಲಿ ದಲ್ಲಾಳಿಗಳು ಕಾಟ, ಹಮಾಲರಿಂದ ಕಾಟ ಮತ್ತೆ ಕೆಲವು ಸಂದರ್ಭದಲ್ಲಿ ತಾವು ಇಲ್ಲಿ ಉತ್ತರದಲ್ಲಿ ಕೊಟ್ಟಿದ್ದೀರಿ ದಲ್ಲಾಳಿಗಳು ರೈತರಿಂದ ಮತ್ತು ಮಾರಾಟಗಾರರಿಂದ ಕಮಿಷನ್ ಪಡೆಯುತ್ತಿರುವ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ ಎಂದು. ಇದು ಕೆಲವು ಪ್ರಕರಣಗಳು ಎಂದು ಏನಿಲ್ಲ ಇದು ಮಾಮೂಲಾಗಿದೆ. ಆ ರೈತರ ಹತ್ತಿರ ಕಮಿಷನ್ ಪಡೆಯಬಾರದು, ತುಂಬಿಕೊಳ್ಳುವವರ ಹತ್ತಿರ ಮಾತ್ರ ಕಮಿಷನ್ ಪಡೆಯಬೇಕೆಂದು ಇದ್ದರೂ ಸಹಿತ ರೈತರ ಹತ್ತಿರವೂ ಕಮಿಷನ್ ಪಡೆಯುವಂತಹ ಸಂದರ್ಭಗಳು ಇವೆ. ಇದರ ಬಗ್ಗೆ ನಿರ್ದಿಷ್ಟವಾಗಿ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಅದರಿಂದ ಏನೂ ಪ್ರಯೋಜನ ಆಗಿಲ್ಲ. ಬೆಂಗಳೂರಿನ ಕೃಷ್ಣರಾಜೇಂದ್ರ ಮಾರ್ಕೆಟ್‌ಗೆ ರೈತರು

ಸರಕು ತೆಗೆದುಕೊಂಡು ಬಂದರೆ ಅವರಿಗೆ ಆಗುವ ಹಿಂಸೆಯನ್ನು ಹೇಳಲು ಸಾಧ್ಯವಿಲ್ಲ. ಕಡೆಗೆ ನಾವು ಏಕಪ್ಪ ತಂದೆವು ಎನ್ನುವ ಪರಿಸ್ಥಿತಿ ಬಂದು ಬಿಟ್ಟಿದೆ. ಕಡೆಗೆ ದುಡ್ಡು ಬೇಡ ಏನೂ ಬೇಡ ಹೊರಟು ಹೋಗೋಣ ಎನ್ನುವ ಪರಿಸ್ಥಿತಿ ಬರುತ್ತದೆ. ಅವರು ಟೆಂಪೋ, ಲಾರಿಯಿಂದ ಇಳಿಸಿದ ತಕ್ಷಣ ಅವರ ಕಷ್ಟ ಪ್ರಾರಂಭವಾಗುತ್ತದೆ. ಇದೆಲ್ಲವನ್ನೂ ನಿಗ್ರಹಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎಂದು ತಿಳಿಸಬೇಕು.

ಶ್ರೀ ಎಚ್. ನಾಗಪ್ಪ : ಮಾನ್ಯ ಅಧ್ಯಕ್ಷರೆ, ಇಂತಹ 410 ಪ್ರಕರಣಗಳು ನಮ್ಮ ಗಮನಕ್ಕೆ ಬಂದಿವೆ. ಅವರಿಗೆ ನಾವು ದಂಡ ಹಾಕಿ 2ಲಕ್ಷ 5ಸಾವಿರ ರೂ. ಸಂಗ್ರಹ ಮಾಡಿ ರೈತರಿಗೆ ವಾಪಸ್ಸು ಕೊಟ್ಟಿದ್ದೇವೆ. ಇನ್ನೂ ಅಂತಹ ಪ್ರಕರಣಗಳು ಇದ್ದರೆ ಅವುಗಳ ಪಟ್ಟಿಯನ್ನು ದಯಮಾಡಿ ಕಳುಹಿಸಿ ಕೊಟ್ಟರೆ ಅವುಗಳ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿ ಸಮಸ್ಯೆಗಳು ಇವೆ. ಅದನ್ನು ಗಮನಿಸಿ ಸರ್ಕಾರ ನಿರ್ದಿಷ್ಟವಾದ, ಸೂಕ್ತವಾದ ಕ್ರಮ ತೆಗೆದುಕೊಂಡರೆ ಮಾತ್ರ ಸಾಧ್ಯವಾಗುತ್ತದೆ. ಎಲ್ಲಾ ಪ್ರದೇಶಗಳಲ್ಲಿ ಒಂದೇ ತರಹ ಇಲ್ಲ. ಇದರ ಬಗ್ಗೆ ಸರ್ಕಾರ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು.

ತಾಲ್ಲೂಕುಗಳಲ್ಲಿ ನಾಡ ಕಛೇರಿಗಳ ಪ್ರಾರಂಭ.

574 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ರಾಜ್ಯದ ಎಲ್ಲಾ ತಾಲ್ಲೂಕಿನ ಕಂದಾಯ ಹೋಬಳಿಗಳಲ್ಲಿ ನಾಡ ಕಛೇರಿಯನ್ನು ತೆರೆಯುವ ಆಲೋಚನೆಯು ಸರ್ಕಾರದವರ ಮುಂದಿದೆಯೇ?*

2) *ತುರ್ತು ಪರಿಸ್ಥಿತಿಗಳಲ್ಲಿ ಇತರ ಇಲಾಖಾ ಕೆಲಸಗಳನ್ನು ಕಂದಾಯ ಇಲಾಖೆಯ ಸಿಬ್ಬಂದಿಗಳಿಂದ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

1) ರಾಜ್ಯದ ಎಲ್ಲಾ ತಾಲ್ಲೂಕುಗಳ ಹೋಬಳಿಗಳ ಪೈಕಿ ಈಗಾಗಲೇ 329 ನಾಡ ಕಛೇರಿಗಳನ್ನು ಪ್ರಾರಂಭಿಸಲಾಗಿದೆ. ಇನ್ನು ಕೆಲವು ನಾಡ ಕಛೇರಿಗಳನ್ನು ಪ್ರಾರಂಭಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

2) ಹೌದು.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ನಾಡ ಕಛೇರಿಗಳ ಸ್ಥಾಪನೆ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದೆ. 329 ನಾಡ ಕಛೇರಿಗಳನ್ನು ಸ್ಥಾಪಿಸಿದ್ದೇವೆ ಎಂದು ಹೇಳಿದ್ದಾರೆ. ಈಗಾಗಲೇ ಇರತಕ್ಕಂತಹ ನಾಡ ಕಛೇರಿಗಳಲ್ಲಿ ಒಬ್ಬ ಡೆಪ್ಯುಟಿ ತಹಸೀಲ್ದಾರ್, ಒಬ್ಬ ಕ್ಲರ್ಕ್, ಒಬ್ಬ ಅಟೆಂಡರ್